ಮಾಡಲಾಗಿದೆ. ಆದಾಗ್ಯೂ ಈ ಟೆಕ್ನೊಎಕನಾಮಿಕ್ ಫಿಸಿಬಿಲಿಟಿ ವರದಿಯನ್ನು ಪರಿಶೀಲಿಸಬೇಕಾಗಿದೆ ಹಾಗೂ ಇದನ್ನು ಇನ್ನೂ ಒಪ್ಪಿಕೊಳ್ಳಬೇಕಾಗಿದೆ.

ಸರ್ಕಾರವು ಈ ಯೋಜನೆಯಲ್ಲಿ ಒಟ್ಟು ಈಕ್ವಿಟಿಯ ಶೇ. 11ರಿಂದ 26ರವರೆಗೆ ಭಾಗವಹಿಸಲು ನಿರ್ಧರಿಸಿದೆ. ಆದರೆ ಈ ಶೇ. 11ರಿಂದ 26ರ ಪರಿಮಿತಿಯಲ್ಲಿ ಎಷ್ಟು ಭಾಗವಹಿಸುವುದು ಎಂಬುದರ ಬಗ್ಗೆ ಅಂತಿಮ ತೀರ್ಮಾನವನ್ನು ಇನ್ನೂ ತೆಗೆದುಕೊಳ್ಳಬೇಕಾಗಿದೆ.

ಇ) ವಿಮಾನ ನಿಲ್ದಾಣ ಒಂದು ಮುಖ್ಯವಾದ ಮೂಲಭೂತ ಸೌಕರ್ಯವಾಗಿದೆ. ಕರ್ನಾಟಕದಲ್ಲಿ ವಿಶೇಷವಾಗಿ ಬೆಂಗಳೂರಿನಲ್ಲಿ ವಿಸ್ತಾರಗೊಳ್ಳುತ್ತಿರುವ ಆರ್ಥಿಕ ಚಟುವಟಿಕೆಗಳಿಂದ ಹೆಚ್ಚುತ್ತಿರುವ ವಾಯು ಸಾರಿಗೆ ಬೇಡಿಕೆಯನ್ನು ಪರಿಗಣಿಸಿ ಕರ್ನಾಟಕ ಸರ್ಕಾರವು ಬೆಂಗಳೂರಿನಲ್ಲಿ ಹೊಸ ನವೀನ ಮಾದರಿಯ ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ಸೌಕರ್ಯವನ್ನು ಒದಗಿಸಲು ಸಹಾಯಕವಾದ ಕ್ರಮ ತೆಗೆದುಕೊಳ್ಳುತ್ತಿರುವುದು. ವಿಮಾನ ನಿಲ್ದಾಣಕ್ಕಾಗಿ ಪ್ರವೀಣರ ಸಮಿತಿಯು ಗುರುತಿಸಿರುವ ಜಮೀನನ್ನು ವಶಪಡಿಸಿಕೊಳ್ಳುವುದಲ್ಲದೆ, ಅವಶ್ಯಕವಾದ ಮೂಲಭೂತ ಸೌಕರ್ಯವನ್ನು ಒದಗಿಸುವುದು ಹಾಗೂ ಈಕ್ವಿಟಿಯಲ್ಲಿ ಭಾಗವಹಿಸುವುದು, ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದೊಂದಿಗೆ ಮೂಲಭೂತ ಒಪ್ಪಿಗೆಗಳನ್ನು ಪಡೆಯಲು ಕಾರ್ಯ ನಿರ್ವಹಿಸುತ್ತಿದೆ. ಈ ಯೋಜನೆಯನ್ನು 'ಬಿಲ್ಡ್-ಓನ್-ಆಪರೇಟ್' ಆಧಾರದ ಮೇಲೆ ಖಾಸಗಿ ಸಂಘದವರಿಗೆ ನಿರ್ವಹಿಸಲು ಒಪ್ಪಿಸಲಾಗಿದೆ.

ವಿಷಯ:- ಕೆ.ಐ.ಎ.ಡಿ.ಬಿ.ಯವರು ಬೆಂಗಳೂರು ಉತ್ತರ ತಾಲ್ಲೂಕಿನ ಮೀನ ಕುಂಟೆ ಗ್ರಾಮದಲ್ಲಿ ವಶಪಡಿಸಿಕೊಂಡಿರುವ ಜಮೀನಿನ ವಿಸ್ತೀರ್ಣ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 506 (937)

ಶ್ರೀ ಕುಂಬ್ಳೆ ಸುಂದರರಾವ್ (ಸುರತ್ಕಲ್):- ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಮತ್ತು ಸಂಪನ್ಮೂಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೆಐಎಡಿಬಿ.ಯವರು ಬೆಂಗಳೂರು ಉತ್ತರ ತಾಲ್ಲೂಕಿನ ಮೀನಕುಂಟೆ ಗ್ರಾಮದಲ್ಲಿ ಭೂಸ್ವಾಧೀನ ಮಾಡಿಕೊಂಡಿರುವ ಜಮೀನಿನ ವಿಸ್ತೀರ್ಣ ಎಷ್ಟು?

ಆ) ಇದನ್ನು ಯಾವ ಉದ್ದೇಶಕ್ಕಾಗಿ ಭೂಸ್ವಾಧೀನಪಡಿಸಿಕೊಳ್ಳಲಾಗಿದೆ ಹಾಗೂ ಸದರಿ ಜಮೀನನ್ನು ಯಾರಿಗೆ ಮಂಜೂರು ಮಾಡಲಾಗಿದೆ?

ಇ) ಸದರಿ ಭೂಮಾಲೀಕರುಗಳಿಗೆ ನ್ಯಾಯಸಮ್ಮತವಾದ ಸಕಾಲಿಕ ಪರಿಹಾರವನ್ನು ನೀಡಲಾಗಿದೆಯೇ ಹಾಗೂ ಅದರ ಒಟ್ಟು ಮೊತ್ತ ಎಷ್ಟು?

ಈ) ಸದರಿ ಭೂಮಿಯ ಭೂಮಾಲೀಕರುಗಳು ಭೂಸ್ವಾಧೀನಕ್ಕೆ ತಮ್ಮ ಪೂರ್ಣ

ಸಮ್ಮತಿಯನ್ನು ನೀಡಿದ್ದಾರೆಯೇ, ನೀಡಿಲ್ಲವಾದಲ್ಲಿ ಆ ಕುರಿತು ಸರ್ಕಾರದವರು ಕೈಗೊಂಡ ಕ್ರಮಗಳೇನು?

ಉ) ತೋಟಗಾರಿಕಾ ಭೂಮಿಯಾಗಿದ್ದ ಸದರಿ ಜಮೀನನ್ನು ಕೈಗಾರಿಕಾ ವಲಯಕ್ಕೆ ನೀಡುವುದರಿಂದ ಉಂಟಾಗುವ ಪರಿಸರ ಮಾಲಿನ್ಯದ ಬಗ್ಗೆ ಸರ್ಕಾರದವರು ಕೈಗೊಳ್ಳುವ ಕ್ರಮಗಳೇನು?

ಶ್ರೀ ಆರ್.ವಿ.ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಮತ್ತು ಸಂಪನ್ಮೂಲ ಅಭಿವೃದ್ಧಿ ಸಚಿವರು):-

ಅ) 205.05 ಎಕರೆಗಳು.

ಆ) ಕೈಗಾರಿಕಾ ಪ್ರದೇಶ ನಿರ್ಮಾಣ ಮಾಡಲು ಭೂಮಿಯನ್ನು ಸ್ವಾಧೀನಗೊಳಿಸಿದೆ. ಇದರಲ್ಲಿ 113 ಎಕರೆ 12 ಗುಂಟೆ ಜಮೀನನ್ನು ಐ.ಟಿ.ಸಿ ಕಂಪನಿಗೆ ಹಂಚಿಕೆ ಮಾಡಲಾಗಿದೆ.

ಇ) ಹೌದು. ರೂ.4 ಕೋಟಿ 2 ಲಕ್ಷ ಪರಿಹಾರ ಧನವನ್ನು ನೀಡಲಾಗಿದೆ.

ಈ) ಒಟ್ಟು ಭೂ ಮಾಲೀಕರ ಪೈಕಿ ಇಬ್ಬರು ಮಾತ್ರ ಉಚ್ಚ ನ್ಯಾಯಾಲಯಕ್ಕೆ ಮೇಲ್ಮನವಿ ಮಾಡಿದ್ದು ಉಳಿದ ಭೂಮಾಲೀಕರು ಒಪ್ಪಂದದ ಮೇರೆಗೆ ಪರಿಹಾರ ಧನ ಪಡೆದುಕೊಳ್ಳಲು ಸಮ್ಮತಿ ಸೂಚಿಸಿದ್ದಾರೆ.

ಉ) ಯಾವುದೇ ಕೈಗಾರಿಕೆಯನ್ನು ಸ್ಥಾಪಿಸುವ ಮುನ್ನ ಸಂಬಂಧಿಸಿದ ಘಟಕಗಳು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ಭಾರತ ಸರ್ಕಾರದ ಪರಿಸರ ಇಲಾಖೆಯಿಂದ ಅನುಮೋದನೆ ಕಡ್ಡಾಯವಾಗಿ ಪಡೆಯಬೇಕಾಗಿದ್ದು ಈ ರೀತಿಯ ನಿಬಂಧನೆಯನ್ನು ಘಟಕಕ್ಕೆ ಮೂಲಭೂತ ಸೌಕರ್ಯ, ಉತ್ತೇಜನ ಮತ್ತು ರಿಯಾಯಿತಿ ನೀಡಿ ಹೊರಡಿಸುವ ಆದೇಶದಲ್ಲಿ ಹಾಕಲಾಗುತ್ತಿದೆ.

ವಿಷಯ:- ರಾಜ್ಯದಲ್ಲಿರುವ ಸಕ್ಕರೆ ಕಾರ್ಖಾನೆಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 509 (943)

ಶ್ರೀ ಮಂಜುನಾಥ ಸಿ.ಕುನ್ನೂರ್ (ಶಿಗ್ಗಾಂವ್):- ಮಾನ್ಯ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಸಕ್ಕರೆ ಕಾರ್ಖಾನೆಗಳ ಸಂಖ್ಯೆ ಎಷ್ಟು : ಅವು ಯಾವುವು?

ಆ) 1993-94ರಿಂದ 1995-96ರವರೆಗೆ (ಮೂರು ವರ್ಷಗಳಲ್ಲಿ) ರಾಜ್ಯದಲ್ಲಿ ವಿವಿಧ ಕಾರ್ಖಾನೆಗಳಿಂದ ಎಷ್ಟು ಕಬ್ಬು ಅರೆಯಲಾಗಿದೆ?

ಇ) ಕಬ್ಬು ಬೆಳೆಗಾರರಿಗೆ ಪ್ರತಿ ವರ್ಷ ಒಂದು ಟನ್‌ಗೆ ಎಷ್ಟು ಹಣ ಪಾವತಿ